**All India Radio: Bangalore**
**National Bulletin In Kannada**
**06.06.2026 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**06.06.2026 19.35 hrs**

**<>><><*><><<>**

ಮುಖ್ಯಾಂಶಗಳು

**೧. ಆರ್ಥಿಕ ಸಲಹಾ ಮಂಡಳಿ ಸಭೆ; ಜಾಗತಿಕ ಪ್ರಕ್ಷುಬ್ಧತೆಯ ಸಮಯದಲ್ಲಿ ಭಾರತದ ಆರ್ಥಿಕ ಬೆಳವಣಿಗೆ ಹೆಚ್ಚಿಸಲು ಪ್ರಧಾನಿ ಸಲಹೆ**

**೨. ಆರೋಗ್ಯ ಸಿಬ್ಬಂದಿ ಮೇಲ್ವಿಚಾರಣೆಯಲ್ಲಿ ನಡೆಯುವ ಹೆರಿಗೆ ಪ್ರಮಾಣ ಶೇಕಡಾ ೯೧.೩ ಕ್ಕೆ ಹೆಚ್ಚಳ- ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿ**

**೩. ಏಷ್ಯಾ ಕಪ್ ಹಾಕಿ ೨೦೨೬; ಹದಿನೆಂಟು ವರ್ಷದೊಳಗಿನವರ ಪುರುಷರ ವಿಭಾಗದ ಫೈನಲ್‌ನಲ್ಲಿ ಜಪಾನ್ ವಿರುದ್ಧ ಭಾರತಕ್ಕೆ ಭರ್ಜರಿ ಜಯ**

**೪. ಇಂಗ್ಲೆಂಡ್ - ಐರ್ಲೆಂಡ್ ಪ್ರವಾಸಕ್ಕಾಗಿ, ಭಾರತದ ಟಿ-೨೦ ಕ್ರಿಕೆಟ್ ತಂಡ ಪ್ರಕಟಿಸಿದ ಬಿಸಿಸಿಐ; ಶ್ರೇಯಸ್ ಅಯ್ಯರ್ ನಾಯಕ, ತಂಡದಲ್ಲಿ ಸ್ಥಾನ ಪಡೆದ ವೈಭವ್ ಸೂರ್ಯವಂಶಿ**

**<>><><*><><<>**

ಪ್ರಧಾನಿ ನರೇಂದ್ರ ಮೋದಿ ಅವರು, ಪ್ರಧಾನಮಂತ್ರಿ-ಆರ್ಥಿಕ ಸಲಹಾ ಮಂಡಳಿ- ಇಎಸಿ ಯ ಸದಸ್ಯರೊಂದಿಗೆ ಇಂದು ಸಭೆ ನಡೆಸಿದರು. ಜಾಗತಿಕ ಪ್ರಕ್ಷುಬ್ಧತೆಯ ಸಮಯದಲ್ಲಿ ಭಾರತದ ಆರ್ಥಿಕ ಬೆಳವಣಿಗೆಯನ್ನು ಮತ್ತಷ್ಟು ಹೆಚ್ಚಿಸಲು ಪ್ರಧಾನಿ ಮತ್ತು ಇಎಸಿ ವಿವಿಧ ವಿಚಾರಗಳು ಮತ್ತು ಕ್ರಮಗಳ ಕುರಿತು ಚರ್ಚಿಸಿದರು. ಪಶ್ಚಿಮ ಏಷ್ಯಾ ಸಂಘರ್ಷವು, ಭಾರತ ಸೇರಿದಂತೆ ಪ್ರಪಂಚದ ಮೇಲೆ ಬೀರಿದ ಪ್ರಭಾವದ ಬಗ್ಗೆ ಸದಸ್ಯರು ತಮ್ಮ ಮೌಲ್ಯಮಾಪನವನ್ನು ನೀಡಿದರು. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಭಾರತದ ಆರ್ಥಿಕ ಪರಿವರ್ತನೆ ಮತ್ತು ದೀರ್ಘಕಾಲೀನ ಅಭಿವೃದ್ಧಿ ಆದ್ಯತೆಗಳಿಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಿತು ಎಂದು ತಿಳಿಸಿದ್ದಾರೆ. ಜೊತೆಗೆ ಸುಧಾರಣಾ ಪ್ರಕ್ರಿಯೆಗೆ ಇನ್ನಷ್ಟು ವೇಗ ನೀಡುವುದು ಹಾಗೂ ಜೀವನ ಸುಲಭತೆ ಮತ್ತು ವ್ಯಾಪಾರ ಸುಲಭತೆಯನ್ನು ಖಚಿತಪಡಿಸುವ ಕುರಿತು ಅಭಿಪ್ರಾಯ ಹಂಚಿಕೊಳ್ಳಲಾಯಿತು ಎಂದು ಪ್ರಧಾನಿ ಹೇಳಿದ್ದಾರೆ.

**<>><><*><><<>**

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-ಎನ್‌ಎಫ್‌ಎಚ್‌ಎಸ್-೬ರ ವರದಿ ಕುರಿತಂತೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾಡಿರುವ ಟೀಕೆಗಳಿಗೆ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಇಂದು ಪ್ರತಿಕ್ರಿಯೆ ನೀಡಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಸಚಿವರು, ಸಾರ್ವಜನಿಕ ಆರೋಗ್ಯದಂತಹ ಮಹತ್ವದ ವಿಷಯವನ್ನು ರಾಜಕೀಯ ವಾಗ್ವಾದಕ್ಕೆ ಸೀಮಿತಗೊಳಿಸಬಾರದು. ಆಯ್ದ ಅಂಶಗಳ ಓದು ರಾಜಕೀಯಕ್ಕೆ ನೆರವಾಗಬಹುದು, ಆದರೆ ನಿಜಾಂಶಗಳು ರಾಷ್ಟ್ರದ ಹಿತವನ್ನು ಸಾಧಿಸುತ್ತವೆ ಎಂದು ಹೇಳಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತದ ಆರೋಗ್ಯ ಸೇವಾ ವ್ಯವಸ್ಥೆಯಲ್ಲಿ ಉಂಟಾಗಿರುವ ಮಹತ್ವದ ಪರಿವರ್ತನೆಯನ್ನು ಎನ್‌ಎಫ್‌ಎಚ್‌ಎಸ್-೬ ರ ದತ್ತಾಂಶ ಪ್ರತಿಬಿಂಬಿಸುತ್ತದೆ ಎಂದು ಸಚಿವರು ಪ್ರತಿಪಾದಿಸಿದ್ದಾರೆ. ಎನ್‌ಎಫ್‌ಎಚ್‌ಎಸ್ -೩ ಮತ್ತು ೬ ವರದಿಗಳನ್ನು ಹೋಲಿಕೆ ಮಾಡಿದ ಸಚಿವರು, ಗರ್ಭಧಾರಣೆಯ ಮೊದಲ ತ್ರೈಮಾಸಿಕದಲ್ಲೇ ನೋಂದಣಿಯಾಗುವ ಗರ್ಭಿಣಿಯರ ಪ್ರಮಾಣವು ಶೇಕಡಾ ೪೩.೯ ರಿಂದ ಶೇಕಡಾ ೭೬.೨ ಕ್ಕೆ ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ. ಸಂಸ್ಥೆಗಳಲ್ಲಿನ ಹೆರಿಗೆಗಳ ಪ್ರಮಾಣವು ಶೇಕಡಾ ೩೮.೭ ರಿಂದ ಶೇಕಡಾ ೯೦.೬ ಕ್ಕೆ ಏರಿಕೆಯಾದರೆ, ಪರಿಣತ ಆರೋಗ್ಯ ಸಿಬ್ಬಂದಿಯ ಸಮ್ಮುಖದಲ್ಲಿ ನಡೆಯುವ ಹೆರಿಗೆಗಳ ಪ್ರಮಾಣವು ಶೇಕಡಾ ೪೬.೬ ರಿಂದ ಶೇಕಡಾ ೯೧.೩ ಕ್ಕೆ ಹೆಚ್ಚಳವಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಇವು ಕೇವಲ ಅಂಕಿಅಂಶಗಳಲ್ಲ, ಲಕ್ಷಾಂತರ ತಾಯಂದಿರು ಸಮಯೋಚಿತ ಆರೈಕೆ, ಸುರಕ್ಷಿತ ಹೆರಿಗೆ ಮತ್ತು ಉತ್ತಮ ಆರೋಗ್ಯ ಫಲಿತಾಂಶಗಳನ್ನು ಪಡೆಯುತ್ತಿರುವುದರ ಪ್ರತೀಕವಾಗಿದೆ ಎಂದು ಅವರು ಹೇಳಿದ್ದಾರೆ. ಪೂರ್ಣ ಲಸಿಕಾ ವ್ಯಾಪ್ತಿಯು ಶೇಕಾಡ ೮೭.೧ ಕ್ಕೆ ಏರಿಕೆಯಾಗಿದೆ ಹಾಗೂ ಆರೋಗ್ಯ ವಿಮಾ ವ್ಯಾಪ್ತಿಯು ಶೇಕಡಾ ೪.೯ ರಿಂದ ಶೇಕಡಾ ೬೦.೨ ಕ್ಕೆ ಹೆಚ್ಚಳವಾಗಿದೆ ಎಂದು ಸಚಿವ ಜೆ.ಪಿ.ನಡ್ಡಾ ತಿಳಿಸಿದ್ದಾರೆ.

<>><><*><><<>

ಮಧ್ಯಪ್ರದೇಶದಲ್ಲಿ ಬಿಜೆಪಿ ಅಭ್ಯರ್ಥಿಗಳಾದ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಮತ್ತು ರಜನೀಶ್ ಅಗರ್ವಾಲ್ ಇಂದು ರಾಜ್ಯಸಭಾ ಚುನಾವಣೆಗೆ ತಮ್ಮ ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಪಕ್ಷದ ಹಿರಿಯ ನಾಯಕರಾದ ಮಧ್ಯಪ್ರದೇಶ ಮುಖ್ಯಮಂತ್ರಿ ಡಾ.ಮೋಹನ್ ಯಾದವ್, ಬಿಜೆಪಿ ರಾಜ್ಯಾಧ್ಯಕ್ಷ ಹೇಮಂತ್ ಖಂಡೇಲ್ವಾಲ್ ಹಾಗೂ ಸಚಿವ ಕೈಲಾಶ್ ವಿಜಯವರ್ಗಿಯಾ ಹಾಜರಿದ್ದರು. ಕಾಂಗ್ರೆಸ್ ತನ್ನ ಅಭ್ಯರ್ಥಿಯಾಗಿ ಮಾಜಿ ಸಂಸದೆ ಮೀನಾಕ್ಷಿ ನಟರಾಜನ್ ಅವರನ್ನು ಕಣಕ್ಕಿಳಿಸಿದೆ. ಮಧ್ಯಪ್ರದೇಶದಿಂದ ಮೂರು ರಾಜ್ಯಸಭಾ ಸ್ಥಾನಗಳಿಗೆ ನಾಮಪತ್ರ ಸಲ್ಲಿಸಲು ಇದೇ ಸೋಮವಾರ ಕೊನೆಯದಿನವಾಗಿದೆ.

<>><><*><><<>

ಕೇಂದ್ರ ಸರ್ಕಾರ, ಕಾನೂನು ಮಾಪನ ಶಾಸ್ತ್ರ ಚೌಕಟ್ಟಿನ ಅಡಿಯಲ್ಲಿ ಖಾದ್ಯ ತೈಲಗಳಿಗೆ ಪ್ರಮಾಣಿತ ಪ್ಯಾಕ್‌ಗಳ ಗಾತ್ರಗಳನ್ನು ಪರಿಚಯಿಸಿದೆ. ಇದು ಮಾರುಕಟ್ಟೆಯಲ್ಲಿ ಹೆಚ್ಚಿನ ಪಾರದರ್ಶಕತೆ ಮತ್ತು ಏಕರೂಪತೆಯನ್ನು ತರುತ್ತದೆ. ಗ್ರಾಹಕ ವ್ಯವಹಾರಗಳ ಇಲಾಖೆಯು, ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನವನ್ನು ತಿದ್ದುಪಡಿ ಮಾಡಿ, ಖಾದ್ಯ ತೈಲಗಳು, ಕೊಬ್ಬಿನ ನಿವ್ವಳ ಪ್ರಮಾಣ ಮತ್ತು ಪ್ರಮಾಣಿತ ಪ್ಯಾಕ್ ಗಾತ್ರಗಳ ನಿರ್ಣಯವನ್ನು ಇದರಡಿಯಲ್ಲಿ ನಿಯಂತ್ರಿಸುತ್ತದೆ. ಪರಿಷ್ಕೃತ ನಿಯಮಗಳ ಅಡಿಯಲ್ಲಿ ತಾಳೆ ಎಣ್ಣೆ, ಸೋಯಾಬೀನ್, ಸೂರ್ಯಕಾಂತಿ, ಸಾಸಿವೆ ಎಣ್ಣೆ ಸೇರಿದಂತೆ ಪ್ರಮುಖ ಖಾದ್ಯ ತೈಲಗಳಿಗೆ ಪ್ಯಾಕ್ ಗಾತ್ರಗಳನ್ನು ನಿಗದಿಪಡಿಸಲಾಗಿದೆ. ೨೦೦ ಗ್ರಾಂ, ೫೦೦ ಗ್ರಾಂ, ೧ ರಿಂದ ೫ ಕೆ.ಜಿ, ೧೫ ಕೆ.ಜಿ ಹಾಗೂ ೨೦ ಕೆ.ಜಿ ಗಾತ್ರದ ಪ್ಯಾಕ್‌ಗಳನ್ನು ಅನುಮೋದಿಸಲಾಗಿದೆ.

**<><><*><><>**

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ, ಸಿಬಿಎಸ್‌ಇ ಅಂಕಗಳ ಪರಿಶೀಲನೆ ಮತ್ತು ಮರುಮೌಲ್ಯಮಾಪನಕ್ಕೆ ಅರ್ಜಿಗಳನ್ನು ಸಲ್ಲಿಸಲು ನಾಳೆಯ ವರೆಗೆ ವಿಸ್ತರಿಸಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ವಿದ್ಯಾರ್ಥಿಗಳು ಈಗ ಭಾನುವಾರ ಮಧ್ಯರಾತ್ರಿಯವರೆಗೆ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಮಂಡಳಿ ತಿಳಿಸಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅರ್ಜಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಹೆಚ್ಚುವರಿ ಸಮಯವನ್ನು ನೀಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸಿಬಿಎಸ್‌ಇ ತಿಳಿಸಿದೆ.

**<><><*><><>**

ಕಳೆದ ಹನ್ನೆರಡು ವರ್ಷಗಳಲ್ಲಿ ಭಾರತದ ಸೌರ ವಿದ್ಯುತ್ ಸಾಮರ್ಥ್ಯವು ೨.೮ ಗಿಗಾವ್ಯಾಟ್‌ನಿಂದ ೧೫೫ ಗಿಗಾವ್ಯಾಟ್‌ಗೆ ಏರಿಕೆಯಾಗಿದೆ ಎಂದು ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ತಿಳಿಸಿದ್ದಾರೆ. ದೇಶದ ४೦ ಲಕ್ಷಕ್ಕೂ ಹೆಚ್ಚು ಮನೆಗಳು ಸೌರಶಕ್ತಿಯಿಂದ ಬೆಳಗುತ್ತಿದೆ. ಕೃಷಿ ಕ್ಷೇತ್ರದಲ್ಲಿ ಸೌರಶಕ್ತಿ ಸಾಮರ್ಥ್ಯ ದ್ವಿಗುಣಗೊಂಡಿರುವುದು, ಪರಿಸರ ಸಂರಕ್ಷಣೆಯೊಂದಿಗೆ ಅಭಿವೃದ್ಧಿಯೂ ಸಾಧ್ಯ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ. ದೇಶದ ರೈತರು ಪ್ರಸ್ತುತ ಕೇವಲ ಆಹಾರ ಉತ್ಪಾದಕರಾಗಿಯೇ ಉಳಿದಿಲ್ಲ, ಇಂಧನ ಉತ್ಪಾದಕರಾಗಿಯೂ ರೂಪುಗೊಳ್ಳುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಪ್ರತಿ ಮನೆಯ ಮೇಲ್ಛಾವಣಿಯನ್ನು ಸೌರಶಕ್ತಿ ಆಧಾರಿತವಾಗಿಸುವುದು, ಪ್ರತಿಯೊಂದು ಮನೆಯನ್ನು ಇಂಧನ ಕೇಂದ್ರವನ್ನಾಗಿಸುವುದು ಹಾಗೂ ಪ್ರತಿಯೊಂದು ಕೃಷಿ ಭೂಮಿಯನ್ನು ಇಂಧನ ಉತ್ಪಾದನಾ ಕೇಂದ್ರವನ್ನಾಗಿಸುವ ಸಂಕಲ್ಪದೊಂದಿಗೆ ಭಾರತ, ೫೦೦ ಗಿಗಾವ್ಯಾಟ್ ನವೀಕರಿಸಬಹುದಾದ ಇಂಧನ ಸಾಮರ್ಥ್ಯದ ಗುರಿಯತ್ತ ವೇಗವಾಗಿ ಸಾಗುತ್ತಿದೆ ಎಂದು ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಒತ್ತಿ ಹೇಳಿದ್ದಾರೆ.

<>><><*><><<>

ನವ ಚಂಡಿಗಢದ ಮುಲ್ಲನಪುರ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ ಮತ್ತು ಅಫ್ಘಾನಿಸ್ತಾನದ ನಡುವಿನ ಏಕೈಕ ಟೆಸ್ಟ್ ಪಂದ್ಯದ ಮೊದಲ ದಿನವಾದ ಇಂದು ದಿನದಾಟದ ಅಂತ್ಯಕ್ಕೆ ಭಾರತ, ೮೫ ಓವರ್‌ಗಳಲ್ಲಿ ೩ ವಿಕೆಟ್ ಕಳೆದುಕೊಂಡು ೩೬೮ ರನ್ ಗಳಿಸಿದೆ. ಭಾರತದ ಪರ ಕೆ.ಎಲ್.ರಾಹುಲ್ ಶತಕ ಗಳಿಸಿದ್ದು, ಎರಡನೇ ವಿಕೆಟ್ ಜೊತೆಯಾಟಕ್ಕೆ ಸಾಯಿ ಸುದರ್ಶನ್ ಅವರೊಂದಿಗೆ ೧೩೯ ರನ್ ಕಲೆಹಾಕಿದರು. ನಂತರ ಶತಕ ಗಳಿಸಿದ ಶುಭ್‌ಮನ್ ಗಿಲ್ ಹಾಗೂ ಅರ್ಧ ಶತಕ ಗಳಿಸಿದ ರಿಷಭ್ ಪಂತ್ ಕಣದಲ್ಲಿದ್ದಾರೆ.

<>><><*><><<>

ಜಪಾನ್‌ನ ಕಾಕಮಿಗಹರಾದಲ್ಲಿ ನಡೆದ ಏಷ್ಯಾ ಕಪ್ ಹಾಕಿ ೨೦೨೬ರ ಹದಿನೆಂಟು ವರ್ಷದೊಳಗಿನವರ ಪುರುಷರ ವಿಭಾಗದ ಫೈನಲ್‌ನಲ್ಲಿ ಭಾರತ, ಆತಿಥೇಯ ಜಪಾನ್ ತಂಡವನ್ನು ೪-೧ ಅಂತರದಿಂದ ಸೋಲಿಸಿ, ದಾಖಲೆಯ ಮೂರನೇ ಬಾರಿಗೆ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. ಆಶಿಷ್ ತಾನಿ ಪುರ್ತಿ ಹ್ಯಾಟ್ರಿಕ್ ಗೋಲು ಗಳಿಸಿದರೆ, ನಾಯಕ ಕೇತನ್ ಕುಶ್ವಾಹಾ ೧ ಗೋಲು ಗಳಿಸಿ, ಭಾರತದ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ಜಪಾನ್ ಪರವಾಗಿ ನುಮಾದಾ ಗಾಕು ಏಕೈಕ ಗೋಲು ಗಳಿಸಿ, ಕೊಂಚ ಪ್ರತಿರೋಧ ಒಡ್ಡಲು ಪ್ರಯತ್ನಿಸಿದರು. ವಿಜೇತ ಭಾರತ ತಂಡದ ಪ್ರತಿಯೊಬ್ಬ ಆಟಗಾರನಿಗೆ ೩ ಲಕ್ಷ ರೂಪಾಯಿ ಹಾಗೂ ತರಬೇತು ಸಿಬ್ಬಂದಿಗೆ ೧ ಲಕ್ಷದ ೫೦ ಸಾವಿರ ರೂಪಾಯಿಗಳ ನಗದು ಬಹುಮಾನವನ್ನು ಹಾಕಿ ಇಂಡಿಯಾ ಘೋಷಿಸಿದೆ.

<>><><*><><<>

ಇಂಗ್ಲೆಂಡ್ ಮತ್ತು ಐರ್ಲೆಂಡ್ ಪ್ರವಾಸಕ್ಕಾಗಿ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ- ಬಿಸಿಸಿಐ, ಭಾರತದ ೧೬ ಸದಸ್ಯರನ್ನೊಳಗೊಂಡ ಟಿ-೨೦ ಕ್ರಿಕೆಟ್ ತಂಡವನ್ನು ಪ್ರಕಟಿಸಿದೆ. ಸೂರ್ಯಕುಮಾರ್ ಯಾದವ್ ಬದಲಿಗೆ ಶ್ರೇಯಸ್ ಅಯ್ಯರ್ ಅವರನ್ನು ಭಾರತದ ಹೊಸ ನಾಯಕರನ್ನಾಗಿ ನೇಮಿಸಲಾಗಿದೆ. ತಿಲಕ್ ವರ್ಮಾ ಅವರನ್ನು ಉಪನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಐಪಿಎಲ್ ೨೦೨೬ ರ ಋತುವಿನಲ್ಲಿ ಅತ್ಯಧಿಕ ರನ್ ಗಳಿಸಿದ ಹಿನ್ನೆಲೆಯಲ್ಲಿ ಯುವ ಪ್ರತಿಭೆ ವೈಭವ್ ಸೂರ್ಯವಂಶಿ ಅವರಿಗೆ ಮೊದಲ ಬಾರಿಗೆ ತಂಡದಲ್ಲಿ ಸ್ಥಾನ ಲಭಿಸಿದೆ. ಪ್ರಿನ್ಸ್ ಯಾದವ್ ಕೂಡ ೧೬ ಸದಸ್ಯರ ತಂಡದಲ್ಲಿ ಸ್ಥಾನಪಡೆದಿದ್ದಾರೆ.

<>><><*><><<>

೨೦೨೬ ರ ನಾರ್ವೆ ಚೆಸ್ ಪ್ರಶಸ್ತಿಯನ್ನು ಗೆದ್ದ ಆರ್.ಪ್ರಜ್ಞಾನಂದ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಈ ಮೈಲಿಗಲ್ಲು ಅವರ ಆಟದ ಶ್ರೇಷ್ಠತೆಯನ್ನು ತೋರುತ್ತದೆ ಎಂದು

ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ. ಪ್ರಜ್ಞಾನಂದ ಅವರ ಭವಿಷ್ಯದ ಪ್ರಯತ್ನಗಳಿಗೆ ಪ್ರಧಾನಿ ಶುಭ ಹಾರೈಸಿದ್ದಾರೆ.

**<><><*><><<>**

ಪಂಜಾಬ್‌ನಲ್ಲಿ ಇಂದು ಫಿರೋಜ್‌ಪುರ-ಫಜಿಲ್ಕಾ ರಸ್ತೆಯಲ್ಲಿ ಕುಟುಂಬದ ಸದಸ್ಯರನ್ನು ಕರೆದೊಯ್ಯುತ್ತಿದ್ದ ವಾಹನವು, ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕನಿಷ್ಠ ಒಂಬತ್ತು ಮಂದಿ ಮೃತಪಟ್ಟಿದ್ದು, ೨೨ ಜನರು ಗಾಯಗೊಂಡಿದ್ದಾರೆ. ಈ ದುರಂತಕ್ಕೆ ಪ್ರಧಾನಿ ನರೇಂದ್ರ ಮೋದಿ ತೀವ್ರ ದುಖಃ ವ್ಯಕ್ತಪಡಿಸಿದ್ದಾರೆ. ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ. ಅಪಘಾತದಲ್ಲಿ ಗಾಯಗೊಂಡವರಿಗೆ ಶೀಘ್ರ ಚೇತರಿಕೆಗೆ ಅವರು ಹಾರೈಸಿದ್ದಾರೆ. ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ವಾರಸುದಾರರಿಗೆ ೨ ಲಕ್ಷ ರೂಪಾಯಿ ಮತ್ತು ಗಾಯಗೊಂಡವರಿಗೆ ೫೦ ಸಾವಿರ ರೂಪಾಯಿ ಪರಿಹಾರವನ್ನು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.

**<><><*><><<>**

ರಾಜ್ಯ ಹಣಕಾಸು ಆಯೋಗಗಳಿಗಾಗಿ ಅಗತ್ಯ ದತ್ತಾಂಶಗಳ ಕುರಿತ ಸಮಿತಿಯ ವರದಿಯನ್ನು ಇದೇ ಲರಂದು ಬಿಡುಗಡೆ ಮಾಡಲಾಗುತ್ತದೆ. ಈ ಕುರಿತು ಪಂಚಾಯತ್ ರಾಜ್ ಸಚಿವಾಲಯ ಪ್ರಕಟಣೆ ನೀಡಿದ್ದು, ಈ ವರದಿಯ ಬಿಡುಗಡೆ, ಭಾರತದ ಹಣಕಾಸು ವಿಕೇಂದ್ರೀಕರಣವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕೈಗೊಂಡಿರುವ ನಿರಂತರ ಪ್ರಯತ್ನಗಳಿಗೆ ಮಹತ್ವದ ಹೆಜ್ಜೆಯಾಗಿದೆ ಎಂದು ತಿಳಿಸಿದೆ. ವರದಿಯು, ರಾಜ್ಯ ಹಣಕಾಸು ಆಯೋಗಗಳಿಗೆ ಅಗತ್ಯವಿರುವ ಪ್ರಮುಖ ದತ್ತಾಂಶಗಳ ಸಮಗ್ರ ಹಾಗೂ ವ್ಯವಸ್ಥಿತ ನಕ್ಷೆಯನ್ನು ಒದಗಿಸುವುದರ ಜೊತೆಗೆ, ದತ್ತಾಂಶಗಳ ಲಭ್ಯತೆ, ಪ್ರಮಾಣೀಕರಣ, ಪರಸ್ಪರ ಕಾರ್ಯಸಾಧ್ಯತೆ ಮತ್ತು ಸಂಸ್ಥೆಗಳ ಸಾಮರ್ಥ್ಯ ವೃದ್ಧಿಗೆ ಸಂಬಂಧಿಸಿದಂತೆ ಅನುಷ್ಠಾನಗೊಳಿಸಬಹುದಾದ ಶಿಫಾರಸ್ಸುಗಳನ್ನು ಒಳಗೊಂಡಿದೆ ಎಂದು ಸಚಿವಾಲಯ ತಿಳಿಸಿದೆ. ಭಾರತ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ಡಾ.ವಿ.ಅನಂತ ನಾಗೇಸ್ವರನ್ ಈ ವರದಿಯನ್ನು ಬಿಡುಗಡೆ ಮಾಡಲಿದ್ದಾರೆ.

**<><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<><><ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>**